ಆಟೋವೊಂದನ್ನು ಹತ್ತಿದೆ. ಆಟೋ ಓಡಿಸುತ್ತಿದ್ದ ಯುವಕ ಚಾಲಕನ ಬಲಗೈನ (ತೋಳು ಮತ್ತು ಹಸ್ತದ ನಡುವಿನ ಭಾಗ) ಮೇಲೆ ಪವಿತ್ರ ಎಂದು ಹಚ್ಚೆಯಿದ್ದುದು ನನಗೆ ನಿಚ್ಚಳವಾಗಿ ಕಾಣಿಸಿತು. ಆ ಹೆಸರಿನ ಹುಡುಗಿ ಆತನ ಪ್ರೇಮಿಯೇ ಇರಬೇಕೆಂದು ನನಗೆ ಅನಿಸಿತು. ಅವನು ಅವಳನ್ನು ಅತಿಯಾಗಿ ಪ್ರೀತಿಸುತ್ತಿರಬೇಕು, ಅದರಿಂದಾಗಿ ಅವಳ ಹೆಸರನ್ನು ತನ್ನ ಕೈಮೇಲೆ ಹಚ್ಚೆ ಹಾಕಿಸಿಕೊಂಡಿದ್ದಾನೆ ಎಂದು ನನ್ನ ಮನಸ್ಸಿನಲ್ಲಿ ಅನಿಸತೊಡಗಿತು. ಆಟೋ ಇಳಿದ ಮೇಲೂ ಅವನ ಕೈಮೇಲಿದ್ದ ಹಚ್ಚೆ ಪದೇ ಪದೇ ನೆನಪಾಗಿ ನಾನು ಅದರ ಗುಂಗಿನಿಂದ ಹೊರಬರಲು ಸಾಧ್ಯವಾಗಲೇ ಇಲ್ಲ. ಅಂದು ಕಾಲೇಜು ಮುಗಿಸಿ ಕೊಂಡು ರೂಮಿಗೆ ಹೋದರೂ ಮನಸ್ಸಿನಲ್ಲಿ ಇಲ್ಲದ ಗಡಿಬಿಡಿ. ಕೊನೆಗೆ ಹೇಮಾಳ ಹೆಸರನ್ನು ನಾನು ಹಚ್ಚೆ ಹಾಕಿಸಿಕೊಳ್ಳಬೇಕು ಎಂದು ನನ್ನ ಮನಸ್ಸಿನಲ್ಲಿ ಹುಚ್ಚೇ ಹಿಡಿಯಿತು. ಅವಳಿಗೆ ನಾನು ಹಾಕಿಸಿಕೊಂಡಿರುವ ಅವಳ ಹೆಸರಿನ ಹಚ್ಚೆಯನ್ನು ತೋರಿಸಿ ನಾನವಳನ್ನು ಎಷ್ಟು ಪ್ರೀತಿಸುತ್ತೇನೆ ಎಂಬುದನ್ನು ಮನದಟ್ಟು ಮಾಡಿಕೊಡಬೇಕು ಎಂಬ ಭಾವ ಮನದಲ್ಲಿ ಮೂಡಿದೊಡನೆ ನಾನು ಸುಮ್ಮನೆ ಕೂರಲಿಲ್ಲ. ಮೈಸೂರಿನಲ್ಲಿ ಎಲ್ಲಿ ಹೋದರೂ ಹಚ್ಚೆ ಹಾಕುವ ಹೆಂಗಸರು ಯಾರಾದರೂ ಕಾಣಸುತ್ತಾರೋ ಎಂದು ಹುಡುಕತೊಡಗಿದೆ. ಯಾರಲ್ಲಿಯೂ ಕೇಳಲೂ ಇಲ್ಲ. ನಾನೊಬ್ಬನೇ ಎಲ್ಲಾ ಕಡೆ ಹುಡುಕತೊಡಗಿದೆ.

ಅದೊಂದು ದಿನ ಸಂಜೆ ಕೆ ಆರ್ ಮಾರುಕಟ್ಟೆಯ ಬಳಿಯಲ್ಲಿ ತನ್ನ ಮುಂದೆ ಹಚ್ಚೆ ಹಾಕುವ ಸಲಕರಣೆಗಳನ್ನಿಟ್ಟುಕೊಂಡು ಮುಚ್ಚಿದ ಅಂಗಡಿಯ ಗೋಡೆಗೊರಗಿ ಚಕ್ಕಂಬಕ್ಕಲ ಹಾಕಿಕೊಂಡು ಕುಳಿತಿರುವುದು ಕಾಣಿಸಿ ಅತೀವ ಸಂತಸವಾಯಿತು. ಅವಳು ಇಳಕಲ್ ಸೀರೆಯುಟ್ಟು ತಲೆ ತುಂಬಾ ಸೆರಗು ಹೊದ್ದು ಮೂಗಿನಲ್ಲಿ ದೊಡ್ಡ ಮೂಗುತಿ, ಕಿವಿಗಳಲ್ಲಿ ದೊಡ್ಡದಾದ ಬೆಂಡೋಲೆಗಳನ್ನು ಧರಿಸಿ ಕಪ್ಪು ಮೈಬಣ್ಣದಿಂದ ಕೂಡಿದ ಮಧ್ಯಮ ವಯಸ್ಸಿನ ಲಕ್ಷಣವಾದ ಹೆಂಗಸಾಗಿದ್ದಳು. ಅವಳ ಹಣೆ ಮತ್ತು ಎರಡೂ ಕೈಗಳ ಮೇಲೆ ಹಚ್ಚೆಗಳು ಮೂಡಿದ್ದವು. ಅವಳ ಹತ್ತಿರ ನಿಂತು ಎತ್ತಲೋ ನೋಡುತ್ತಾ ಅವಳನ್ನು ಸೂಕ್ಷ್ಮವಾಗಿ ಗಮನಿಸತೊಡಗಿದೆ. ಅವಳು ಹಚ್ಚೆ ಹಾಕುವ ಹೆಂಗಸೆಂಬುದು ಮನದಟ್ಟಾಯಿತು. ಇನ್ನೇನು ಹೋಗಿ ಅವಳ ಬಳಿ ಹಚ್ಚೆ ಹಾಕಿಸಿಕೊಳ್ಳಬೇಕೆಂದು ಅನಿಸುವಷ್ಟರಲ್ಲಿ ಮನದಲ್ಲಿ ನೂರಾರು ಆಲೋಚನೆಗಳು ಸುಳಿದು ಹೋದವು. ಕೈಮೇಲೆ ಹಚ್ಚೆ ಹಾಕಿಸಿಕೊಂಡರೆ ಎಲ್ಲರೂ ಕೇಳುತ್ತಾರೆ, ಅವರಿಗೆಲ್ಲಾ ಏನೆಂದು ಉತ್ತರಿಸುವುದು? ದೊಡ್ಡ ಸುದ್ದಿಯೇ ಆಗಿಬಿಡಬಹುದು ಎಂದೆನಿಸಿದ ತಕ್ಷಣ ಅಲ್ಲಿ ನಿಲ್ಲಲಾಗದೇ ವಾಪಾಸು ಹೊರಟೆ.

ರೂಮಿಗೆ ಬಂದು ಚಡಪಡಿಸತೊಡಗಿದೆ. ಹೇಗಾದರೂ ಮಾಡಿ ಹೇಮಾಳ ಹೆಸರನ್ನು ಹಚ್ಚೆ ಹಾಕಿಸಿಕೊಳ್ಳಬೇಕು. ಎಲ್ಲಿ ಹಾಕಿಸಿಕೊಳ್ಳಬಹುದು..? ತೋಳಿನ ಮೇಲೆ ಹಾಕಿಸಿಕೊಳ್ಳುವುದೇ..? ಯಾರ ಕಣ್ಣಿಗೆ ಬೀಳದಿದ್ದರೂ ಅಮ್ಮನ ಕಣ್ಣಿಗೆ ಬೀಳಬಹುದು. ಹಾಗಾದರೆ ಎಲ್ಲಿ ಹಾಕಿಸಿಕೊಳ್ಳಬಹುದು..? ಯೋಚಿಸುತ್ತಾ ಯೋಚಿಸುತ್ತಾ ಕೊನೆಗೊಂದು ನಿರ್ಧಾರಕ್ಕೆ ಬಂದೆ. ನನ್ನ ಎದೆಯ ಎಡಭಾಗದಲ್ಲಿ ಹೇಮಾಳ ಹೆಸರನ್ನು ಹಚ್ಚೆ ಹಾಕಿಸಿಕೊಳ್ಳುವುದು. ಆ ನಿರ್ಧಾರವನ್ನು ನಾನು ಯಾಕೆ ತೆಗೆದುಕೊಂಡೆನೆಂದು ನನಗೆ ಈಗಲೂ ತಿಳಿದಿಲ್ಲ. ನಿರ್ಧರಿಸಿಕೊಂಡವನೇ ಮರುದಿನ ಸಂಜೆ ಆ ಹೆಂಗಸು ಕುಳಿತಿದ್ದ ಸ್ಥಳಕ್ಕೆ ಹೋದೆ. ನನ್ನ ಅದೃಷ್ಟವೋ (ಮುಂದಿನ ದಿನಗಳಲ್ಲಿ ದುರಾದೃಷ್ಟ) ಎಂಬಂತೆ ಆ ಹೆಂಗಸು ಅಲ್ಲಿಯೇ ಕುಳಿತಿದ್ದಳು. ಅವಳಲ್ಲಿ ಹೋಗಿ ವಿಷಯ ತಿಳಿಸಿದೆ. ಎರಡೇ ಅಕ್ಷರ, ಇಲ್ಲಿ ಹಚ್ಚೆ ಹಾಕಿಸಿಕೊಳ್ಳಲು ನನಗೆ ಮುಜುಗರ ಬೇರೆ ಸ್ಥಳಕ್ಕೆ ಹೋಗೋಣವೆಂದೆ. ಅವಳಿಗೆ ಏನನ್ನಿಸಿತೋ ನನ್ನ ಮುಖವನ್ನೇ ದಿಟ್ಟಿಸಿ ನೋಡಿದಳು. ನಾನು ತಲೆತಗ್ಗಿಸಿದೆ. ಇದೇ ಸ್ಥಳದಲ್ಲಿ ಬೆಳಿಗ್ಗೆ ಆರು ಗಂಟೆಗೆ ಬಂದುಬಿಡು ಹಚ್ಚೆ ಹಾಕುತ್ತೇನೆ ಎಂದಳು. ಅವಳ ಮಾತನ್ನು ನಂಬಿದೆ.




ಮಾರನೇ ದಿನ ಬೆಳಿಗ್ಗೆಯೇ ಎದ್ದು ಅಲ್ಲಿಗೆ ಹೋದೆ.

ಅಲ್ಲಿ ಜನರು ಯಾರೂ ಇರಲಿಲ್ಲ. ಹಚ್ಚೆ ಹಾಕುವ ಹೆಂಗಸು ಅವಳು ತಿಳಿಸಿದಂತೆ ಆಗಲೇ ಅಲ್ಲಿ ಬಂದು ಕುಳಿತಿದ್ದಳು. ನಾನು ಒಂದು ಪೇಪರಿನ ಮೇಲೆ ಪೆನ್ನಿನಲ್ಲಿ ಹೇಮಾ ಎಂದು ಎರಡಕ್ಷರ ಬರೆದೆ. ಅವಳು ಅದನ್ನು ತುಂಬಾ ಸಣ್ಣದಾಗಿ ನನ್ನ ಎಡ ಎದೆಯ ಮೇಲೆ ಹಚ್ಚೆ ಹಾಕುವ ಇಂಕಿನಿಂದ ಬರೆದಳು. ಬರೆದ ಮೇಲೆ ಸೂಜಿಯಿಂದ ಅದರ ಮೇಲೆ ಚುಚ್ಚಿ ಚುಚ್ಚಿ ಇಂಕು ಚರ್ಮದ ಒಳಗೆ ಹೋಗುವಂತೆ ಮಾಡಿದಳು. ನನಗೆ ನೋವಾಗುತ್ತಿತ್ತಾದರೂ ಸಹಿಸಿಕೊಂಡೆ. ಎಲ್ಲಾ ಮುಗಿದ ಮೇಲೆ ಅರಿಸಿನವನ್ನು ಯಾವುದೋ ಎಣ್ಣೆಯೊಂದಿಗೆ ಬೆರೆಸಿ ಹಚ್ಚೆಯ ಮೇಲೆ ಹಚ್ಚಿದಳು. ಅಲ್ಪ ಸಮಯದಲ್ಲಿಯೇ ಎಲ್ಲವೂ ಮುಗಿಯಿತು. ಮೂರು ದಿನ ನೀರು ಸೋಕಿಸಬೇಡ ಎಂದಳು. ಅವಳಿಗೆ ದುಡ್ಡು ಕೊಟ್ಟು ನಾನು ರೂಮಿಗೆ ಹೋಗಿ ಕನ್ನಡಿ ನೋಡಿಕೊಂಡೆ. ನನ್ನ ಎದೆಯ ಮೇಲೆ ಸಣ್ಣದಾಗಿ ಹೇಮಾಳ ಹೆಸರು ಮೂಡಿದುದನ್ನು ಕಂಡು ಅತೀವ ಸಂತೋಷವಾಯಿತು.

ಆ ವಾರದ ಕೊನೆಯಲ್ಲಿ ಊರಿಗೆ ಹೋಗಲಿಲ್ಲ. (ಎದೆಯ ಮೇಲೆ ಇನ್ನೂ ಸ್ವಲ್ಪ ಊತವಿತ್ತು) ಅಮ್ಮನಿಗೆ ಯುನಿವರ್ಸಿಟಿಯಲ್ಲಿ ಏನೋ ಕೆಲಸವಿದೆ ಬರುವುದಿಲ್ಲ ಎಂದು ಫೋನು ಮಾಡಿ ತಿಳಿಸಿದೆ. ಅದರ ಮುಂದಿನ ವಾರ ಊರಿಗೆ ಹೋದೆ. ನನ್ನ ದುರಂತದ ಕ್ಷಣಗಳು ನನಗಾಗಿ ಅಲ್ಲಿ ಕಾದು ಕುಳಿತಿದ್ದವು.

ನಾನು ಸಂಜೆ ಮನೆಯ ಬಾಗಿಲು ಬಡಿದಾಗ ಅಮ್ಮ ಹಸನ್ಮುಖಿಯಾಗಿಯೇ ಬಾಗಿಲು ತೆರೆದು ಟೀ ಕುಡೀತೀಯೋನೋ.. ಎಂದಳು. ಹೂಂ ಎಂದುತ್ತರಿಸಿ ಬೆನ್ನಿಗೆ ತಗುಲಿ ಹಾಕಿಕೊಂಡಿದ್ದ ಬ್ಯಾಗನ್ನು ಸೋಫಾದ ಮೇಲೆ ಬಿಸಾಕಿ ಅದರ ಪಕ್ಕದಲ್ಲಿ ಕುಳಿತೆ. ಷೋಕೇಸಿನಲ್ಲಿದ್ದ ಟೀವಿಯಲ್ಲಿ ಯಾವುದೋ ಧಾರಾವಾಹಿ ಬರುತ್ತಿತ್ತು. ಎದುರಿಗಿದ್ದ ಟೀಪಾಯಿಯ ಮೇಲೆ ಮದುವೆಯೊಂದರ ಆಮಂತ್ರಣ ಪತ್ರಿಕೆ ಇತ್ತು. ಸುಮ್ಮನೆ ಕೈಗೆತ್ತಿಕೊಂಡು ಅದನ್ನು ತೆರೆದು ನೋಡಿದೆ. ನನಗೆ ಬರಸಿಡಿಲು ಬಡಿದಂತಾಯಿತು. ಪ್ರಜ್ಞೆ ತಪ್ಪಿ ಬೀಳುವಂತಾಯಿತು. ಅದು ಹೇಮಾಳ ಮದುವೆಯ ಆಮಂತ್ರಣ ಪತ್ರಿಕೆ! ಮದುವೆಗೆ ಇನ್ನೂ ಮೂರೇ ದಿನ ಬಾಕಿಯಿದ್ದವು.

ಅಮ್ಮಾ.. ಎಂದು ಅತೀವ ಹತಾಶೆಯಿಂದ ಜೋರಾಗಿ ಕಿರುಚಿದೆ. ಅದು ಸುತ್ತಮುತ್ತಲ ಮನೆಗೂ ಕೇಳಿಸಿರಬಹುದು. ಹಿಂದಿನ ಬೀದಿಗೂ ಕೇಳಿಸಿರ ಬಹುದು. ಅಡುಗೆ ಮನೆಯಲ್ಲಿದ್ದ ಅಮ್ಮ ಏನಾಯಿತೋ.. ಎಂದು ಕೂಗಿಕೊಂಡು ಅತೀವ ಗಾಬರಿ, ಆತಂಕಗಳಿಂದ ಓಡೋಡಿ ಬಂದಳು. ನಾನು ಸೋಫಾದ ಮೇಲಿನಿಂದ ಕುಸಿದು ಕೆಳಗೆ ಕುಳಿತು ಅಮ್ಮನ ಕಾಲುಗಳನ್ನು ಎರಡೂ ಕೈಗಳಿಂದ ಬಾಚಿ ತಬ್ಬಿಕೊಂಡು ಗಟ್ಟಿಯಾಗಿ ಹಿಡಿದುಕೊಂಡೆ. ಅಮ್ಮ ಏನಾಯಿತೋ ಕಂದಾ.. ಎಂದು ಅಳುತ್ತಾ ಕೆಳಗೆ ಕುಸಿದಳು. ಅಪ್ಪನಿಗಾದಂತೆ ನನಗೂ ಹೃದಯಾಘಾತವಾಯಿತೇನೋ ಎಂದು ಅವಳಿಗೆ ತೀವ್ರವಾದ ಭಯವಾಗಿರಬೇಕು. ನನ್ನ ಎದೆಯನ್ನು ನೀವುತ್ತಾ ಏನಾಯಿತು.. ಏನಾಯಿತು.. ಎದೆಯಲ್ಲಿ ನೋವು ಕಾಣಿಸಿದೆಯಾ ಮಗನೇ.. ಎಂದು ತಗ್ಗಿದ್ದ ನನ್ನ ಮುಖವನ್ನು ಎರಡೂ ಕೈಗಳಿಂದ ಎತ್ತಿಹಿಡಿದು ತೀವ್ರ ಆತಂಕದಿಂದ ಕುಗ್ಗಿದ ದನಿಯಲ್ಲಿ ಕೇಳಿದಳು.

ನಾನು ಮುಚ್ಚಿದ್ದ ನನ್ನ ಕಣ್ಣುಗಳನ್ನು ತೆರೆದು ಅವಳಿಗೆ ಉತ್ತರಿಸಲು ಕೆಲವಾರು ನಿಮಿಷಗಳೇ ಹಿಡಿದವು. ಅಮ್ಮ ಹೆದರಿಕೆಯಿಂದ ಏನು ಮಾಡಲೂ ತೋಚದೆ ಗಡ ಗಡ ನಡುಗುತ್ತಿದ್ದಳು.

'ಅಮ್ಮಾ ಹೇಮಾಳನ್ನು ನಾನು ಪ್ರೀತಿಸುತ್ತಿದ್ದೇನೆ... ಹೇಗಾದರೂ ಮಾಡಿ ಅವಳ ಮದುವೆಯನ್ನು ತಪ್ಪಿಸಮ್ಮ..' ಎಂದವನೇ ನಾನು ಬಿಕ್ಕಿ ಬಿಕ್ಕಿ ಅಳತೊಡಗಿದೆ.

ನನ್ನ ಮಾತು ಕೇಳಿ ಸದ್ಯ ಇದು ಹೃದಯದ ಕಾಯಿಲೆಯಲ್ಲ, ಮನಸ್ಸಿನ ಕಾಯಿಲೆ ಎಂದು ಅಮ್ಮನಿಗೆ ಖಾತ್ರಿಯಾಗಿರಬೇಕು. ಅವಳ ಮುಖದಲ್ಲಿ ಸಮಾಧಾನದ ಗೆರೆಗಳು ಮೂಡಿ ಅವಳು ನಿರಾಳವಾದಂತೆ ಕಂಡಳು.

'ಅಷ್ಟೇನಾ ಕಂದಾ.. ಯೋಚನೆ ಮಾಡಬೇಡಾ.. ಅವಳೇನು ಅಪ್ಸರೆಯಾ.. ಅವಳಿಗಿಂತ ಲಕ್ಷಣವಾಗಿರುವ ನಮ್ಮ ಅಂತಸ್ತಿಗೆ ತಕ್ಕದಾದ ಹೆಣ್ಣನ್ನು ತಂದು ನಿನಗೆ ಮದುವೆ ಮಾಡಿಸುತ್ತೇನೆ.. ಚಿಂತೆ ಮಾಡಬೇಡ ಮಗನೇ..'

ನನ್ನ ಅಮ್ಮ ಏನು ತಾನೇ ಹೇಳಿಯಾಳು..? ಅವಳಿಗೆ ನನ್ನ ಪ್ರೀತಿಯ ತೀವ್ರತೆ, ಆಳ ಅಗಲಗಳು ತಿಳಿದಿದ್ದವಾ..? ಎಂದಾದರೂ ನಾನು ಅವಳಿಗೆ ಹೇಮಾಳನ್ನು